


ಮತ್ತಾಕೆ ಮಗ್ಳು ಪ್ರಿಯಾಂಕಾ ಗಾಂಧಿ ಕೈಯ್ಯಲ್ಲೇ ಅಲ್ವೆ..." ಎಂದು ಮಾತನಾಡಿ ಕೊನೆಯ ದಮ್ಮು ಎಳೆದು ಸಿಗರೇಟಿನ ಮೋಟನ್ನು ಕಾಲಿನ ಕೆಳಗಿಟ್ಟು ಹೊಸಕಿಹಾಕಿದ್ದ. ನಾಗರೆಡ್ಡಿ ಇದ್ದಿದ್ದರಲ್ಲಿ ಒಳ್ಳೆ ರಾಜಕೀಯ ನಾಲೆಡ್ಜ್ ಹೊಂದಿದ್ದರಿಂದ ಆತನ ಮಾತುಗಳು ಅಕ್ಕಯ್ಯಮ್ಮನ ಮೆದುಳಲ್ಲಿ ಜಾಗ ಮಾಡಿಕೊಂಡು ಕುಳಿತುಕೊಂಡಿದ್ದವು.

ನಾಮಪತ್ರ ಸಲ್ಲಿಸುವ ದಿನ ಬಂದೇ ಬಿಟ್ಟಿದ್ದರಿಂದ ಊರಲ್ಲಿ ಗಂಡು–ಹೆಣ್ಣು, ಮಕ್ಕಳು–ಮುದುಕರೆಂಬ ಭೇದಭಾವವಿಲ್ಲದೆ ಹೊಲ ತೋಟಗಳ ಕಡೆ ಹೋಗದೆ ಊರಲ್ಲಿ ಅಲ್ಲಲ್ಲೇ ಗುಜುಗುಂಪುಲಲ್ಲಿ ಮುಳುಗಿದ್ದರು. ಕ್ಯಾಂಡಿಡೇಟ್ ಆರಿಸುವ ಬಗ್ಗೆ ಎಲ್ಲಾ ವರ್ಗದಲ್ಲೂ ಚರ್ಚೆಗಳು ಬಿಸಿಯೇರಿದ್ದವು. ಊರಿನ ಕೆಲವು ಹಿರಿಯರು, "ಅಯ್ಯಯ್ಯಪ್ಪ ಪಾರ್ಲಿಮೆಂಟ್, ಅಸೆಂಬ್ಲಿ ಎಲೆಕ್ಷನ್ ಯಂಗೋ ನಿಭಾಯಿಸ್ಬೋದು. ಆದ್ರೆ ಈ ಮಿಂಡ್ರುಗುಟ್ಟಿದ್ ಗ್ರಾಮಪಂಚಾಯ್ತಿ ಎಲೆಕ್ಷನ್ ಐತಲ್ಲ ಬೋಳಿಮಗುಂದು ಏಳು ಕೆರೆ ನೀರು ಕುಡಿಸ್ಟೈತೆ. ನಮ್ ಕಾಲ್ದಾಗೆ ಇಂಗಿರ್ಲಿಲ್ಲ ತೆಗಿರಿ. ಊರೋರೆಲ್ಲ ಊರ್ ಮುಂದೆ ಕುಂತ್ಕಂಡು ಯಾರಿಗೆ ಹಾಕ್ಬೇಕು ಅಂತ ತೀರ್ಮಾನ ತಗಂಡು ಪ್ರತಿಯೊಬ್ರೂ ಒಂದೇ ಪಾರ್ಟಿಗೆ ಗುದ್ದಿ ಬರ್ತಿದ್ವಿ. ಈಗ ನೋಡಿದ್ರೆ ಒಂದೊಂದ್ ಮನೇಲೂ ಮೂರ್ನಾಲ್ಕು ಪಾರ್ಟಿಗ್ಳು ಹುಟ್ಕಂಡವೆ. ಎಲೆಕ್ಷನ್ ಬಂದ್ರೆ ಯಾರ್ಗೂ ಲಂಗು ಲಗಾಮು ಇಲ್ದಂಗಾಗ್ಬೈತೆ..." ಎಂದು ಪ್ರಸ್ತುತ ರಾಜಕೀಯ ವಿದ್ಯಮಾನಗಳ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದರು. ಆವೊತ್ತು ರಾತ್ರಿ ಒಂದ್ಪೊತ್ತಿನಲ್ಲಿ ಅಕ್ಕಯ್ಯಮ್ಮನಿಗೆ ಜಯಮಂಗಲಿ ನದಿ ತುಂಬಿ ಹರಿದಂತೆ, ನೀರಿನಲ್ಲಿ ಆನೆಗಳು ಓಡಾಡಿದಂತೆ, ಆನೆಗಳನ್ನು ಸತ್ತ ತನ್ನ ಗಂಡ ಓಡಿಸುತ್ತಿರುವಂತೆ ಕನಸು ಬಿದ್ದು ಎಚ್ಚರವಾಗಿ ಎದೆ ಢವಗುಟ್ಟಿತ್ತು. ಬೆಳಗ್ಗೆ ಕಾಫಿ ಕುಡಿದು ರುದ್ರಯ್ಯ ಮೇಷ್ಟ್ರ ಮನೆಯ ಕಡೆ ನಡೆದಿದ್ದಳು. ರುದ್ರಯ್ಯ ಮೇಷ್ಟ್ರು, ಮೇಷ್ಟ್ರ ಕೆಲಸದಿಂದ ರಿಟೈರ್ಡ್ ಆಗಿ ಆರೇಳು ವರ್ಷಗಳಾದರೂ ಇನ್ನೂ ಗಟ್ಟಿಮುಟ್ಟಾಗಿದ್ದಾರೆ. ಶಿವಾಚಾರದವರಾದರೂ ತನ್ನ ಅಂಗಡಿಯಿಂದ ರುದ್ರಯ್ಯ ಮೇಷ್ಟ್ರು ಹೆಂಡತಿಗೆ ಗೊತ್ತಾಗದಂತೆ ಕರೆಂಟ್ ರೂಮಿಗೆ ಆಮ್ಲೇಟ್ ತರಿಸಿಕೊಂಡು ತಿನ್ನುವುದು ಅಕ್ಕಯ್ಯಮ್ಮನಿಗೆ ಗೊತ್ತಿತ್ತು. ರುದ್ರಯ್ಯನವರ ಹೆಂಡತಿ ರೇಣುಕಮ್ಮನವರು ಪಂಚಾಂಗ ನೋಡುವುದನ್ನು ಕಲಿತಿದ್ದರು. ಊರಿನ ಹೆಂಗಸರು ಅದೂ ಇದೂ ಕೇಳಿಕೊಂಡು ರೇಣುಕಮ್ಮನವರ ಬಳಿ ಬರುತ್ತಿದ್ದರು. ಅವರ ಕೈಗುಣ ಚನ್ನಾಗಿರುವುದರ ಬಗ್ಗೆ ಊರಿನಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಬೆಳಗ್ಗೆಯೇ ಅಕ್ಕಯ್ಯಮ್ಮನನ್ನು ನೋಡಿದ ರುದ್ರಯ್ಯ ಮೇಷ್ಟ್ರು, "ಏನಕ್ಕಯ್ಯಮ್ಮ ಸಮಾಚಾರ, ಬೆಳಿಗ್ ಬೆಳಿಗ್ಗೇನೆ. ಯಾಪಾರ ಚನ್ನಾಗಿ ನಡಿತಿದೆ ಅಂತ ಸುದ್ದಿ..." ಎಂದಿದ್ದರು. "ಪರ್ವಾಗಿಲ್ಲ ಅಯ್ನೋರೆ..." ಎಂದಿದ್ದಳು ಅಕ್ಕಯ್ಯಮ್ಮ. ಒಳಗಿಂದ ಬಂದ ರೇಣುಕಮ್ಮ, "ಏನೇ ಅಕ್ಕಯ್ಯಮ್ಮ ಸಮಾಚಾರ" ಎಂದು ವಿಚಾರಿಸಿಕೊಂಡಿದ್ದರು. ಅಕ್ಕಯ್ಯಮ್ಮ ರಾತ್ರಿ ಬಿದ್ದ ಕನಸಿನ ಬಗ್ಗೆ ಹೇಳುತ್ತಾ ಆತಂಕ ವ್ಯಕ್ತಪಡಿಸಿದ್ದಳು. ರೇಣುಕಮ್ಮ ನಡುಮನೆಯ ಗೋಡೆಗೆ ಹಾಕಿದ್ದ ಶಿವನ ಕ್ಯಾಲೆಂಡರ್ ಕಡೆಗೊಮ್ಮೆ ನೋಡಿ ಕ್ಷಣ ಕಣ್ಮುಚ್ಚಿ ತೆರೆದು, "ಹರಿಯೋ ನೀರು, ಆನೆ, ತೆಂಗಿನ ಮರ ಇವು ಕನಸಿಗೆ ಬಂದ್ರೆ ತುಂಬಾನೆ ಒಳ್ಳೇದು. ಇನ್ನು, ಸತ್ತ ನಿನ್ನ ಗಂಡ ಕನಸಿಗೆ ಬಂದವ್ನೆ ಅಂದ್ರೆ ಅದು ಎಚ್ಚರಿಕೆ. ಗಾಬರಿ ಆಗೋದೇನೂ ಬೇಡ" ಎಂದಿದ್ದರು. ಅಕ್ಕಯ್ಯಮ್ಮ ನಿರಾಳ ಭಾವದಿಂದ ಮನೆಗೆ ಹಿಂತಿರುಗಿದ್ದಳು. ಸ್ನಾನ ಮಾಡಿ ಕುಲದೇವರಾದ ಶ್ರೀ ಕೃಷ್ಣ ಪರಮಾತ್ಮನಿಗೆ ಕಡ್ಡಿ ಹಚ್ಚಿ ಎಲೆಕ್ಷನ್ನಿಗೆ ನಿಂತುಕೊಳ್ಳಲು ಆ ಕ್ಷಣ ನಿರ್ಧರಿಸಿಯೇ ಬಿಟ್ಟಳು. ಮಧ್ಯಾಹ್ನದ ಹೊತ್ತಿಗೆಲ್ಲ ತನ್ನ ನಿರ್ಧಾರವನ್ನು ರಾಮಾದಾಸಪ್ಪ, ನಾಗರೆಡ್ಡಿ ಮತ್ತು ದೇವರಾಜಪ್ಪನವರ ಬಳಿ ತಿಳಿಸಿಯೂ ಬಿಟ್ಟಳು. ಮೂವರೂ ಒಂದಿಷ್ಟು ಲೀಡರ್ ಅನ್ನಿಸಿಕೊಂಡವರನ್ನು ಕರೆಸಿ ಅಕ್ಕಯ್ಯಮ್ಮನನ್ನು ಅವಿರೋಧವಾಗಿ ಆಯ್ಕೆ ಮಾಡುವ ಬಗ್ಗೆ ಪ್ರಸ್ತಾಪಿಸಿದ್ದರು. ಆದರೆ, ಸುಮಾರು ಜನ ಅವರ ಮಾತನ್ನು ವಿರೋಧಿಸಿದ್ದರು. ಪೊಲೀಸ್ ನಂಜುಂಡ, "ಯಾರು ಬೇಕಾದ್ರೂ ನಿಂತ್ಕೊಳ್ಳಿ ಬಿಡ್ರಿ, ಯಾರಿಗೆ ಶಕ್ತಿ ಇರ್ತದೋ ಅವ್ರು